

# ಕಥೆಯ ಕಥೆ

■ ನೇಪಾಳಿ ಮೂಲ: ಗುಪ್ತ ಪ್ರಧಾನ್
■ ಕನ್ನಡಕ್ಕೆ: ಡಿ.ಎನ್. ಶ್ರೀನಾಥ್

ಅವನನ್ನು ಆಗಾಗ ಕಥೆಯನ್ನು ಕಳುಹಿಸಿ ಎಂದು ಆಗ್ರಹಿಸಲಾಗುತ್ತಿತ್ತು. ಅನೇಕ ವರ್ಷಗಳಿಂದ ಕಥೆಯನ್ನು ಬರೆಯುತ್ತಿದ್ದ ಅವನು ಯಾವುದೇ ಆಗ್ರಹವನ್ನು ಸಹಜವಾಗಿ ಅಲ್ಲಗಳೆಯಲಾರ. ಹೀಗಾಗಿ ಅವನು ಬಿಡುವು ಮಾಡಿಕೊಂಡು ಕಥೆಯನ್ನು ಬರೆಯಲೇ ಬೇಕು. ತನ್ನಿಚ್ಛೆಯಿಂದ ಬರವಣಿಗೆಯನ್ನು ಪ್ರಾರಂಭಿಸಿದ ಅವನು ಈಗ ವಿಧಿಯಿಲ್ಲದೆ ಕಥೆಯನ್ನು ಬರೆಯುವ ಕಥೆಗಾರನಾಗಿದ್ದಾನೆ. ಅವನ ಅನೇಕ ಹಿತೈಷಿಗಳು ಬರೆಯುವುದನ್ನು ನಿಲ್ಲಿಸಬೇಡಿ ಎಂದು ಹೇಳುತ್ತಿರುತ್ತಾರೆ. ಇದಕ್ಕಾಗಿ ಅವನು ಇಚ್ಛೆಯಿಲ್ಲದಿದ್ದರೂ ಮುಗುಳ್ನಗುತ್ತಾನೆ. ತನ್ನಿಚ್ಛೆಯಿಂದ ವಾಹನವನ್ನು ಚಾಲನೆ ಮಾಡುವ ತರಬೇತಿಯನ್ನು ಪಡೆಯುವವನು ಜೀವನದ ಕೊಳಕು ಗಲ್ಲಿಗಳಲ್ಲಿ ಜೀವನ ಸಾಗಿಸಲು ಅದೆಷ್ಟು ವಿಘ್ನಗಳೊಂದಿಗೆ ವಾಹನವನ್ನು ಚಾಲನೆ ಮಾಡಬೇಕಾಗುತ್ತದೆ ಎಂಬುದು ಅವನಿಗೆ ಚೆನ್ನಾಗಿ ತಿಳಿದಿದೆ. ಮದ್ಯದ ಚಟ ಹಿಡಿದ ವ್ಯಕ್ತಿ ಅವಮಾನ ಮತ್ತು ನಿಂದನೆಗಳನ್ನು ಸಹಿಸಿಯೂ ತನ್ನ ಆತ್ಮದ ಸಂತುಷ್ಟಿಗಾಗಿ ಒಂದೇ ಸಮನೆ ಕುಡಿಯುವಂತಿವೆ, ಅವನ ಈಚೆಗಿನ ಬರವಣಿಗೆಗಳು. ಬದುಕಿನ ಮಾರ್ಗದಲ್ಲಿ ಅವನ ಚೈತನ್ಯ ಮತ್ತು ಸಂವೇದನೆ ಅನೇಕ ಬಾರಿ ದುಃಖವನ್ನು ಅನುಭವಿಸುತ್ತಾ ನಿತ್ಯ ಅವನನ್ನು ನೆಲಕ್ಕೆ ಕೆಡುವುತ್ತಿದೆ. ಅವನು ತನ್ನ ಅಸ್ತಿತ್ವ ಮತ್ತು ಸ್ವಾಭಿಮಾನದಿಂದ, ತಾನು ಬಿದ್ದಲ್ಲಿಂದ ಎದ್ದು ಮನೆಗೆ ಹೋಗುತ್ತಿರುತ್ತಾನೆ. ಅವನು ನಿತ್ಯ ಕಾಣದ ನೀಲಿ ನೀಲಿ ಪೆಟ್ಟುಗಳ ಗುರುತುಗಳನ್ನು ತನ್ನ ಮನಸ್ಸಿನಲ್ಲಿಟ್ಟುಕೊಂಡು ಮನೆಯನ್ನು ಪ್ರವೇಶಿಸುತ್ತಿದ್ದಾನೆ. ಅವನು ಮನೆಯನ್ನು ಪ್ರವೇಶಿಸಿದಾಗಲೆಲ್ಲಾ, ಅಲ್ಲಿಯೂ ಸಹ ಅವನು ಹೇಗೋ ತನ್ನ ವಾಸ್ತವಿಕತೆಯನ್ನು ಎಲ್ಲರಿಂದ ಮರೆಮಾಚಿಕೊಂಡು ಇರಬೇಕಾಗುತ್ತದೆ, ಇದು ಅವನಿಗೆ ಮಾತ್ರ ಗೊತ್ತು. ಗೊರ್...ಗೊರ್....ಛಪ್ ಛಪ್ ಸದ್ದಿನೊಂದಿಗೆ ಹಂದಿ ತನ್ನ ಆಹಾರವನ್ನು ಸೇವಿಸುವಂತೆ ಅವನೂ ಸಹ ತನ್ನ ಜೀವನದಲ್ಲಿ ಭೋಗಿಸಿದ ಅನುಭವಗಳಿಗೆ ಲೇಖನಿ ಎಂಬ ನೊಗದೊಂದಿಗೆ ಉತ್ತು ತನ್ನ ಕಥೆಗಳಿಗೆ ರೂಪವನ್ನು ಕೊಡಬೇಕಾಗುತ್ತದೆ.

ಅವನು ತನ್ನ ಬರವಣಿಗೆಯಲ್ಲಿ ಈ ರೀತಿ ಮುಳುಗಿರುತ್ತಾನೆ. ಅವನ ಬರವಣಿಗೆಯಲ್ಲಿ ಚರಸ್ ಸ್ವಾದವಿದೆ. ನಶೆಗೊಳಗಾಗುವ ಕೆಟ್ಟ ಚಟವೂ ಅವನಲ್ಲಿದೆ. ಈ ನಶೆಯಲ್ಲಿಯೇ ಅವನು ನನ್ನ ಮಕ್ಕಳು ಹೀಗೆ ಕಥೆಯನ್ನು